

# ರಾಕ್‌ಲೈನ್ ಸುಧಾಕರ್

## ಕಂಚಿನ ಕಂಠದ ನಂಬಿಕೆಯ ಬಂಟ

‘ಪಂಚರಂಗಿ‘ ಸಿನಿಮಾದ ಕುರುಡು ಮುದುಕನ ಪಾತ್ರದ ಮೂಲಕ ನಟನಾಗಿ ಗುರ್ತಿಸಿಕೊಂಡ ರಾಕ್‌ಲೈನ್ ಸುಧಾಕರ್, ದಶಕಗಳಿಂದ ಸಿನಿಮಾಕ್ಷೇತ್ರದಲ್ಲಿದ್ದವರು. ರಾಕ್‌ಲೈನ್ ಪ್ರೊಡಕ್ಷನ್ ಸಂಸ್ಥೆಯಲ್ಲಿ ಮ್ಯಾನೇಜರ್ ಆಗಿ, ಕಾರ್ಯನಿರ್ವಾಹಕ ನಿರ್ಮಾಪಕನಾಗಿ ಕೆಲಸ ಮಾಡಿದ್ದ ಸುಧಾಕರ್, ಇತ್ತೀಚಿನ ವರ್ಷಗಳಲ್ಲಿ ಬಹುಬೇಡಿಕೆಯ ಪೋಷಕನಟನಾಗಿದ್ದರು. ಸೆ. 24ರಂದು ನಟನೆಗೆ ಅಣಿಯಾಗಿ ಕೂತಿದ್ದ ಸುಧಾಕರ್ ಅವರಿಗೆ ನಿರ್ದೇಶಕ ‘ಆ್ಯಕ್ಷನ್’ ಹೇಳುವ ಮೊದಲೇ ವಿಧಿ ‘ಕಟ್’ ಹೇಳಿದೆ. ನಟ, ಸಂಭಾಷಣೆಕಾರ ಮಾಸ್ತಿ ಕಟ್ಟಿಕೊಟ್ಟಿರುವ ಸುಧಾಕರ್ ವ್ಯಕ್ತಿಚಿತ್ರ ಇಲ್ಲಿದೆ.



ಅದು ರಾಕ್‌ಲೈನ್ ಪ್ರೊಡಕ್ಷನ್ಸ್ ಸಂಸ್ಥೆಯ ಉಚ್ಛ್ರಾಯ ಕಾಲ. ಒಂದು ನಿರ್ಮಾಣ ಸಂಸ್ಥೆ ಒಮ್ಮೆ ಒಂದು ಸಿನಿಮಾ ನಿರ್ಮಾಣ ಮಾಡೋದೇ ಹರಸಾಹಸದ ವಿಷಯ. ಅಂಥದ್ದರಲ್ಲಿ, ಸಾಧುಕೋಕಿಲ ನಿರ್ದೇಶನದ, ದುನಿಯಾ ವಿಜಯ್ ನಟನೆಯ ‘ದೇವ್ರು’, ಯೋಗರಾಜ್ ಭಟ್ ನಿರ್ದೇಶನದ, ದಿಗಂತ್ ನಟನೆಯ ‘ಮನಸಾರೆ’ ಮತ್ತು ಓಂ ಪ್ರಕಾಶ್ ರಾವ್ ನಿರ್ದೇಶನದ ದರ್ಶನ್ ಅಭಿನಯದ ‘ಯೋಧ’ ಈ ಮೂರೂ ಸಿನಿಮಾಗಳ ಶೂಟಿಂಗ್ ಏಕಕಾಲಕ್ಕೇ ರಾಕ್‌ಲೈನ್ ಬ್ಯಾನರ್ ಅಡಿಯಲ್ಲಿ ನಡೆಯುತ್ತಿತ್ತು. ಆದರೆ ನಿರ್ಮಾಪಕ ವೆಂಕಟೇಶ್ ಅವರು ಒಮ್ಮೆಯೂ ಶೂಟಿಂಗ್ ಲೊಕೇಷನ್‌ಗೆ ಬರುತ್ತಿರಲಿಲ್ಲ. ಕಾರಣ ಅವರಿಗೆ ಒಬ್ಬ ವ್ಯಕ್ತಿಯ ಮೇಲೆ ಅಗಾಧ ವಿಶ್ವಾಸವಿತ್ತು. ಎಂಥ ಪರಿಸ್ಥಿತಿಯನ್ನೂ ನಿಭಾಯಿಸ್ತಾರೆ ಎಂಬ ನಂಬಿಕೆ ಇತ್ತು.

ಬೋಳು ತಲೆಯ ಮೇಲೆ ಕೈಯಾಡಿಸುತ್ತ, ಹಣೆಯ ಮೇಲೊಂದು ಭಸ್ಮದ ಗುರುತು ಇಟ್ಟುಕೊಂಡು ಕಂಚಿನ ಕಂಠದಲ್ಲಿ ಗುಡುಗುತ್ತ ಆ ವ್ಯಕ್ತಿ ಇಡೀ ಸೆಟ್ ಅನ್ನು ನಿಯಂತ್ರಣಕ್ಕೆ